ಶ್ರೀ ಎಸ್.ಎಸ್. ಪಾಟೀಲ್ : ಇನ್ನೊಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ. ಅತ್ತಿಮಬ್ಬೆ ಪ್ರಶಸ್ತಿಯನ್ನು ಸಾಹಿತ್ಯ ಪ್ರಶಸ್ತಿಯಾಗಿ ಪ್ರತಿ ವರ್ಷ ಕೊಡುತ್ತಿದ್ದಾರೆ ಈ ವರ್ಷ ಅಲ್ಲಿಯೇ ಕೊಡಬೇಕೆಂದು ತೀರ್ಮಾನ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಅಲ್ಲಿ ಕೊಡಬೇಕಾಗಿತ್ತು. ಆ ದಿವಸದಿಂದ ಸುದ್ದೆವದಿಂದ ಮಳೆಯಾಗಿ ಅದು ಕೊಡುವುದು ನಿಂತಿದೆ. ಆ ಕಾರಣದಿಂದ ಪ್ರತಿ ವರ್ಷ ಅತ್ತಿಮಬ್ಬೆ ಪ್ರಶಸ್ತಿಯನ್ನು ಲಕ್ಕುಂಡಿಯಲ್ಲಿಯೇ ಕೊಡುವುದಕ್ಕೆ ಮಾನ್ಯ ಸಚಿವರು ಆದೇಶ ಮಾಡಬೇಕು. ನಾನು ಕೇಳಿರುವ ಮೂಲ ಪ್ರಶ್ನೆ ಗ್ರಾಮದ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಇಡುತ್ತೀರಿ. ಜಜೆಟ್‌ನಲ್ಲಿ 10 ಕೋಟಿ ರೂ.ಗಳನ್ನು ಪ್ರತಿ ವರ್ಷ ಬಜೆಟ್‌ನಲ್ಲಿ ಹಣ ತೆಗೆಯುತ್ತೀರಾ ಎನ್ನುವುದರ ಬಗ್ಗೆ ತಮ್ಮ ಮೂಲಕ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಸತತವಾಗಿ ಮೂರು ವರ್ಷಗಳಿಂದ ಲಕ್ಕುಂಡಿ ಉತ್ಸವ ಏನು ನಿಂತು ಹೋಗಿತ್ತು; ಅದನ್ನು ಪ್ರಾರಂಭ ಮಾಡಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಂದು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಯಾವ ತರಹ: ನಾವು ಹಂಪಿ ಉತ್ಸವಕ್ಕೆ ಪಬ್ಲಿಸಿಟಿಯನ್ನು ಕೊಡುತ್ತೇವೆ, ಲೈವ್ ಮೂಲಕ ಮೈಸೂರು ಉತ್ಸವದ ಬಗ್ಗೆ ಸಾರ್ವಜನಿಕರಿಗೆ ತಿಳಿಸುತ್ತೇವೆಯೋ, ಅದೇ ತರಹ ಬರುವಂಥ ದಿನಗಳಲ್ಲಿ ಮಾಡುತ್ತೇವೆ. ಬಹುತೇಕ ತಾವು ನೋಡಿರಬಹುದು, ಚಿತ್ರದುರ್ಗ ಉತ್ಸವ ಸತತವಾಗಿ 9 ವರ್ಷಗಳಿಂದ ನಿಂತು ಹೋಗಿತ್ತು ಅದನ್ನೂ ಕೂಡ ನಾವು ಈ ವರ್ಷ ನಡೆಸಿದ್ದೇವೆ. ಬರುವ ವರ್ಷ ಎಲ್ಲಾ ರೀತಿಯಲ್ಲಿ ಲಕ್ಕುಂಡಿ ಉತ್ಸವವನ್ನು ಮಾನ್ಯ ಗೌರವಾನ್ವಿತ ಸದಸ್ಯರುಗಳು ಏನು ತಿಳಿಸಿದರು ಸೌಲಭ್ಯವಾಗಿರಬಹುದು, ಬೇಕಾಗಿರುವಂಥ ಹಣ ಆಗಿರಬಹುದು ಇದರ ಬಗ್ಗೆ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಆದಷ್ಟು ನಾವು ಅಭಿವೃದ್ಧಿ ಪಡಿಸುತ್ತೇವೆಂದು ನಾನು ಸದಸ್ಯರುಗಳಿಗೆ ತಿಳಿಸುತ್ತೇನೆ.

ವಿಷಯ : ರಾಣಿ ಬೆನ್ನೂರು ತಾಲ್ಲೂಕಿನ ಕುಮಾರ ಪಟ್ಟಣದಿಂದ ಹರಿಹರಕ್ಕೆ ಹೋಗುವ ವಾಹನಗಳು ಸುತ್ತು ಬಳಸಿ ಹೋಗುವ ಬಗ್ಗೆ.

220(965) ಶ್ರೀ ಶಿವಣ್ಣ ಜಿ. (ರಾಣೆಬೆನ್ನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣೆಬೆನ್ನೂರು ತಾಲ್ಲೂಕು ಕುಮಾರ ಪಟ್ಟಣದಿಂದ ಹರಿಹರಕ್ಕೆ ಹೋಗಲು ಕೇವಲ 2 ಕಿ.ಮೀ. ಅಂತರ ಇದ್ದರೂ ಸಹ ಸುಮಾರು 15 ವರ್ಷಗಳಿಂದ ಕೆ.ಎಸ್.ಆರ್.ಟಿ.ಸಿ.ಯ ಎಲ್ಲಾ ಬಸ್ಸುಗಳು ಹಾಗೂ ಲಾರಿಗಳು ಸುಮಾರು 8 ಕಿ.ಮೀ. ಸುತ್ತುಬಳಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ವಾಹನಗಳು ಸುತ್ತುಬಳಸಿ ಹೋಗುವುದಕ್ಕೆ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಕುಮಾರಪಟ್ಟಣದಿಂದ ಹರಿಹರಕ್ಕೆ ಹೋಗಲು ಮೊದಲು ಇದ್ದ ಹಳೇ ಸೇತುವೆ ಜೀರ್ಣಾವಸ್ಥೆಯ ಸ್ಥಿತಿಯಲ್ಲಿದ್ದು, ಭಾರಿ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿಲ್ಲದ ಕಾರಣ ಭಾರಿ ವಾಹನಗಳ ಓಡಾಟವನ್ನು ನಿಷೇಧಿಸಲಾಗಿದೆ. ಸುಮಾರು ವರ್ಷಗಳ ಹಿಂದೆ ಹೊಸ ಸೇತುವೆಯನ್ನು ನಿರ್ಮಿಸಿದ್ದರಿಂದ ಕುಮಾರಪಟ್ಟಣದಿಂದ ಹರಿಹರಕ್ಕೆ ಹೋಗುವ ಬಸ್ಸುಗಳು ಹಾಗೂ ಲಾರಿಗಳು ಸುಮಾರು 8 ಕಿ.ಮೀ. ಸುತ್ತು ಬಳಸಿ ಹೋಗುವುದು ಅನಿವಾರ್ಯವಾಗಿದೆ.

ರಾಷ್ಟ್ರೀಯ ಹೆದ್ದಾರಿ ಇಲಾಖೆಯವರು ಹಳೆಯ ಸೇತುವೆಯನ್ನು ದುರಸ್ಥಿಗೊಳಿಸಿ ಭಾರಿ ವಾಹನಗಳು ಓಡಾಡಲು ಸಾಧ್ಯವಾಗುವಂತೆ ವ್ಯವಸ್ಥೆಗೊಳಿಸಿ ಅನುಮತಿಸಿದಲ್ಲಿ ಸಂಸ್ಥೆಯ ವಾಹನಗಳನ್ನು ಹಳೆಯ ಸೇತುವೆ ಮೇಲೆ ಕಾರ್ಯಾಚರಣೆ ಮಾಡಲಾಗುವುದು.

ಶ್ರೀ ಜಿ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ ಇಲಾಖೆಯವರು ಹಳೆಯ ಸೇತುವೆಯನ್ನು ದುರಸ್ತಿಗೊಳಿಸಿ ಭಾರಿವಾಹನಗಳು ಓಡಾಡಲು ಸಾಧ್ಯವಾಗುವಂತೆ ವ್ಯವಸ್ಥೆಗೊಳಿಸಿ ಅನುಮತಿಸಿದಲ್ಲಿ ಸಂಸ್ಥೆಯ ವಾಹನಗಳನ್ನು ಸೇತುವೆಯ ಮೇಲೆ ಓಡಾಡಿಸಲಾಗುವುದೆಂದು ಉತ್ತರದಲ್ಲಿ ಹೇಳುತ್ತಾರೆ. ಅದು ಖರೆ ಇಲ್ಲವೆಂದು ಹೇಳುತ್ತಿಲ್ಲ. ಆದರೆ ಈ ರಾಷ್ಟ್ರೀಯ ಹೆದ್ದಾರಿಯಲ್ಲಿರುವಂತಹ ಆ ಸೇತುವೆ ಬಹಳ ಹಳೆಯದಾಗಿದ್ದು ಮತ್ತು ದುರಸ್ತಿ ಮಾಡಲಾರದಷ್ಟು ಅವರು ಈಗಾಗಲೇ ತೀರ್ಮಾನಕ್ಕೆ ಬಂದಿದ್ದಾರೆನ್ನುವಂತಹ ಭಾವನೆ ಇದೆ. ಅದಕ್ಕಾಗಿ ದಯವಿಟ್ಟು ಹಿಂದಿನ ಒಂದು ಆಧಾರದ ಮೇಲೆ ಸುಮಾರು 8 ಕಿ.ಮೀ. ಸುತ್ತುಬಳಸಿ ಬರುವಂತಹ ಬಸ್ಸುಗಳನ್ನು ಅದರ ಬಗ್ಗೆ ಖರ್ಚುವೆಚ್ಚಗಳನ್ನು ನೋಡಿದರೆ ಹೊಸ ಸೇತುವೆಯನ್ನು ಕಟ್ಟುವುದು ಸೂಕ್ತವೆಂಬುದು ನನ್ನ ಭಾವನೆ ಇದೆ. ದಯವಿಟ್ಟು ಸಂಬಂಧಪಟ್ಟಂತಹ ಇಲಾಖೆಯವರ ಜೊತೆಯಲ್ಲಿ ಮಾತನಾಡಿ ಅಲ್ಲಿ ಹೊಸ ಸೇತುವೆಯನ್ನು ಮಾಡಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಸಭಾದ್ಯಕ್ಷರೆ, ಮಾನ್ಯ ಸದಸ್ಯರೂ ಸಹ ವಿನಂತಿ ಮಾಡಿದ್ದಾರೆ, ನಾನು ಈ ಬಗ್ಗೆ ಸಂಬಂಧಪಟ್ಟ ಸಚಿವರಿಗೆ, ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದು ಆ ಸೇತುವೆಯನ್ನು ತಕ್ಷಣ ದುರಸ್ತಿ ಮಾಡಿ ಬಸ್ ಸಂಚಾರವನ್ನು ಆ ಮೂಲಕ ಹೋಗುವುದಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ನಾನು ಪ್ರಯತ್ನ ಮಾಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜೆ. ಶಿವಣ್ಣ : ಆ ಹಳೆಯ ಸೇತುವೆಯು 3 ಭಾರಿ ರಿಪೇರಿಯಾಗಿದೆ, ಅದು ರಿಪೇರಿ ಮಾಡುವುದಕ್ಕಂತೂ ಆಗುವುದಿಲ್ಲ. ದಯವಿಟ್ಟು ಹೊಸ ಸೇತುವೆಯು ಆಗಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಲೋಕೋಪಯೋಗಿ ಸಚಿವರು ನೀವು ಹೇಳಿ ಸಾರ್. ಸೇತುವೆ ಮುರಿದುಕೊಂಡು ಹೋಗಿದೆ ಎಂದರೆ ಮಾನ್ಯ ಸಾರಿಗೆ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಸದಸ್ಯರು ಬಸ್ ಏತಕ್ಕಾಗಿ ಓಡಾಡುತ್ತಿಲ್ಲವೆಂದು ಕೇಳಿದ್ದಾರೆ. ನಾವು ಇಂತಹ ಕಾರಣಕ್ಕಾಗಿ ಆಗುವುದಿಲ್ಲವೆಂದು ಹೇಳಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸೇತುವೆಯು ಹಾಳಾಗಿದೆ ಎಂದರೆ ಅದರ ಬಗ್ಗೆ ಉತ್ತರವನ್ನು ಯಾರು ಕೊಡಬೇಕು ಸಾರ್?

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಲೋಕೋಪಯೋಗಿ ಸಚಿವರು ಮಾಡಿಸುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದರ ಬಗ್ಗೆ ಉತ್ತರವನ್ನು ಯಾರು ಕೊಡಬೇಕು?

ಶ್ರೀ ಜೆ. ಶಿವಣ್ಣ : ಹಳೆಯ ಸೇತುವೆಯೂ ಖಂಡಿತವಾಗಿಯೂ ರಿಪೇರಿಯಾಗುವುದಿಲ್ಲ. ಅಲ್ಲಿ ಹೊಸ ಸೇತುವೆಯೇ ಆಗಬೇಕಾಗಿದೆ.

ಶ್ರೀ ಎನ್. ಚಲುವರಾಯಸ್ವಾಮಿ : ಬಸ್ ಸಂಚಾರ ಡಿವಿಯೇಟ್ ಆಗಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ಆಗಿರುವುದಕ್ಕೆ ಕಾರಣ ಈ ಸೇತುವೆ ದುರಸ್ತಿಯಾಗದಿರುವುದು ಅಲ್ಲಿ ಬಸ್‌ಗಳು ಓಡಾಡುವುದಕ್ಕೆ ಆಗುವುದಿಲ್ಲವೆಂದು ನಾನು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇನೆ. ಸದಸ್ಯರೂ ಸಹ ರಿಕ್ವೆಸ್ಟ್ ಮಾಡುತ್ತಿದ್ದಾರೆ. ಆ ಇಲಾಖೆಯವರು ಆ ರಸ್ತೆಯನ್ನು ಮಾಡಿಸಿ ಕೊಡುವುದಕ್ಕೆ ಸದಸ್ಯರು ಅವರಿಗೆ ಪತ್ರವನ್ನು ಬರೆಯಬಹುದು. ನಾವು ಸಹ ನಮ್ಮ ಇಲಾಖೆ ವತಿಯಿಂದ ಆ ಬಗ್ಗೆ ರಿಕ್ವೆಸ್ಟ್ ಮಾಡುತ್ತೇವೆ. ಈಗ ಮಾನ್ಯ ಸಚಿವರಾದ ಶ್ರೀ ರೇವಣ್ಣನವರು ಸದನದಲ್ಲಿರುವುದರಿಂದ, ಅವರೇ ಅದರ ಬಗ್ಗೆ ಒಂದು ನಿಮಿಷ ಉತ್ತರ ಹೇಳಿದರೆ ಆಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಅದನ್ನು ಮಾಡುವುದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

ವಿಷಯ: 100 ಸೇತುವೆ ಯೋಜನೆಯಡಿಯಲ್ಲಿ ಕಡೆಕಾರು–ತಡುಕೆರೆ ಹಾಗೂ ಅತ್ರಾತ್ರಿ ಬೆಳ್ಳಂಪಳ್ಳಿಯ ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು.

221(1364) ಶ್ರೀ ರಘುಪತಿ ಭಟ್ ಕೆ. (ಉಡುಪಿ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?